ಅ) ರಾಜ್ಯದಲ್ಲಿ 2002–03ನೇ ಸಾಲಿನಲ್ಲಿ ಮಂಜೂರು ಮಾಡಲಾದ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು;

ಆ) ಪ್ರಸಕ್ತ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಮಂಜೂರಾದ ಪ್ರೌಢ ಶಾಲೆಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಇದರಲ್ಲಿ ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕಿನಲ್ಲಿ ಎಷ್ಟು ಪ್ರೌಢ ಶಾಲೆ ಮಂಜೂರು ಮಾಡಲಾಗಿದೆ?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 75.

ಆ) ಒಂದು.

ಇ) ಇಲ್ಲ.

ರಾಜ್ಯದಲ್ಲಿ ಟಿ.ಸಿ.ಎಚ್. ಕಾಲೇಜು ಮಂಜೂರಾತಿಯ ಬಗ್ಗೆ

2938(2691) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಟಿ.ಸಿ.ಹೆಚ್. ಕಾಲೇಜುಗಳನ್ನು ಮಂಜೂರು ಮಾಡಲಾಗುವುದು;

ಆ) ಯಾವ ಷರತ್ತುಗಳೊಂದಿಗೆ ಈ ಕಾಲೇಜುಗಳನ್ನು ಮಂಜೂರಾತಿ ನೀಡಲಾಗುವುದು;

ಇ) ಯಾವ ಯಾವ ಸ್ಥಳಗಳಲ್ಲಿ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ,ಆ,ಇ) ದಿನಾಂಕ 27–7–2001ರ ಸರ್ಕಾರದ ಆದೇಶ ಸಂಖ್ಯೆ: ಇಡಿ:110:ಪಿಟಿಪಿ:2001ರ ಪ್ರಕಾರ ನಿಗದಿಪಡಿಸಿದ ಪ್ರಕ್ರಿಯೆಯನ್ನು ಅನುಸರಿಸಿ, ಈಗಾಗಲೇ ಅರ್ಹ ಅರ್ಜಿದಾರರಿಗೆ ಎನ್.ಓ.ಸಿ. ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ. ಇನ್ನೂ ಹೆಚ್ಚುವರಿ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯವೆಂದು ಸರ್ಕಾರ ಮನಗಂಡಿದೆ. ಇದಕ್ಕಾಗಿ, ದಿನಾಂಕ 27–7–2001ರ ಸದರಿ ಆದೇಶವನ್ನು ಸೂಕ್ತವಾಗಿ ಮಾರ್ಪಡಿಸಿ, ಹೊಸ ಆದೇಶವನ್ನು ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಅಂತಹ ಎಷ್ಟು ಸಂಸ್ಥೆಗಳನ್ನು ಸ್ಥಾಪಿಸಲು ಎನ್.ಓ.ಸಿ. ಗಳನ್ನು ನೀಡಲಾಗುವುದೆಂದು ನಿರ್ದಿಷ್ಟವಾಗಿ, ಈ ಹಂತದಲ್ಲಿ ಹೇಳಲು ಬರುವುದಿಲ್ಲ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡದ ಸೌಲಭ್ಯ ಕುರಿತು

2939(2692) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬುಡರಕಟ್ಟಿ ಹಾಗು ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಕೂಡಲೇ ಇಲ್ಲಿ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಆರೋಗ್ಯ ಮತ್ತು ಪೌಷ್ಟಿಕ ಆಹಾರ ಯೋಜನೆಯಡಿ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬೈಲಹೊಂಗಲ ನಗರ ಆಶ್ರಯ ಕಾಲೋನಿಯಲ್ಲಿ ರಸ್ತೆ ಡಾಂಬರೀಕರಣ ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದರ ಬಗ್ಗೆ

2940(2693) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದ ಆಶ್ರಯ ಕಾಲೋನಿಯಲ್ಲಿ ರಸ್ತೆಗಳಿಗೆ ಡಾಂಬರೀಕರಣ ಇಲ್ಲದೆ ಹಾಗೂ ಒಳಚರಂಡಿ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಇಲ್ಲಿ ರಸ್ತೆ ಡಾಂಬರೀಕರಣ ಮಾಡಲು ಹಾಗೂ ಒಳಚರಂಡಿ ಯೋಜನೆ ಕೈಗೊಳ್ಳಲು ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) ಹೌದು.

ಆ) ಇದನ್ನು ಒದಗಿಸುವುದು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ.

ಬೆಳಗಾವಿಯ ಸವದತ್ತಿ ತಾಲ್ಲೂಕಿನ ತನಿಕೊಳ್ಳದ ಅಪೂರ್ಣಗೊಂಡಿರುವ ರಂಗ ಮಂದಿರ ಕಟ್ಟಡದ ಬಗ್ಗೆ

2941(2694) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ತನಿಕೊಳ್ಳದಲ್ಲಿ ರಂಗಮಂದಿರ ಕಟ್ಟಡದ ಕೆಲಸ ಅರ್ಧಕ್ಕೆ ನೀತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಕಟ್ಟಡ ಕಟ್ಟಲು ಎಷ್ಟು ಹಣ ಬೇಕಾಗುವುದು;

ಇ) ಸದರಿ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು)

ಅ) ಬಂದಿದೆ.

ಆ) ರೂ. 2.40 ಲಕ್ಷಗಳ ಅಂದಾಜು ವೆಚ್ಚದಲ್ಲಿ ರೂ. 1.00 ಲಕ್ಷ ಬಿಡುಗಡೆ ಮಾಡಲಾಗಿದೆ. ಉಳಿದಮತೆ ರೂ. 1.40 ಲಕ್ಷ ಬೇಕಾಗುತ್ತದೆ.

ಇ) ಸರ್ಕಾರದ ನಿಯಮಗಳಂತೆ ಈಗಾಗಲೇ ಗರಿಷ್ಠ ರೂ. 1.00 ಲಕ್ಷವನ್ನು ನೀಡಿದ್ದು ನಿರ್ಮಾಣ ಕಾರ್ಯ ಮುಗಿಸಲು ಬೇಕಾಗುವ ರೂ. 1.40ನ್ನು ಸ್ಥಳೀಯ ಸಂಪನ್ಮೂಲಗಳಿಂದ ಕ್ರೋಢೀಕರಿಸಿ ಕೊಂಡು ನಿರ್ಮಾಣ ಮುಗಿಸಲು ಕ್ರಮ ಕೈಗೊಳ್ಳುವಂತೆ ಗ್ರಾಮ ಪಂಚಾಯಿತಿಗೆ ತಿಳಿಸಲಾಗಿದೆ.